

ಅರುಣ ಪಿ. ಭಟ್ಟ

# ವಾರಭವಿಷ್ಯ 5.8.2021ರಿಂದ 11.8.2021ರವರೆಗೆ




ಆರಂಭದ ಎರಡು ದಿನದಲ್ಲಿ ಕಾರ್ಯಸಿದ್ಧಿ. ಬಂಧುಗಳ ಆಗಮನದಿಂದ ಕುಟುಂಬದಲ್ಲಿ ಸಂತಸದ ವಾತಾವರಣ. ಮನೆ ಬಾಡಿಗೆಯಿಂದ ಧನಲಾಭ. ರಾಜಕಿಯದವರಿಗೆ ಕೈ ತಪ್ಪಿ ಹೋಗುವ ಅಧಿಕಾರ ಭದ್ರವಾಗುತ್ತದೆ. ಗ್ರಂಥರಚನೆಯಲ್ಲಿ ಆಸಕ್ತಿ. ವಾಹನ ಸೌಖ್ಯ. ಮಕ್ಕಳಿಂದ ಮಾನಸಿಕ ಕಿರಿಕಿರಿ. ಬರತಕ್ಕ ಬಾಕಿ ಹಣ ಬರುವುದು. ಶುಭದಿನ **11.** ಶ್ರೀ ಲಕ್ಷ್ಮೀನರಸಿಂಹ ಪಂಚರತ್ನ ಓದಿರಿ.

---




ವಾರದ ಪ್ರಾರಂಭದಲ್ಲಿ ಚಿಕ್ಕ ಪ್ರವಾಸ. ಸಹೋದರಿಯರಿಂದ ಶುಭವಾರ್ತೆ ಬರಲಿದೆ. ಹಸ್ತಾಲಂಕಾರ ವಸ್ತು ಖರಿದಿ. ವಾರ ಮಧ್ಯದಲ್ಲಿ ಜ್ವರ ಪೀಡೆ ವೈದ್ಯಕೀಯ ಖರ್ಚು ಹೆಚ್ಚಾಗುತ್ತದೆ. ಕೋರ್ಟ್ ಪ್ರಕಣದಲ್ಲಿ ಗೆಲುವು ಸಾಧ್ಯತೆ. ಅವಮಾನಕರ ಪ್ರಸಂಗ. ವಿವಾಹ ಪ್ರಸ್ತಾವದಲ್ಲಿ ಯಶಸ್ಸು. ವಾರಾಂತ್ಯದಲ್ಲಿ ಪರೋಪಕಾರ. ಸ್ನೇಹಿತರಿಂದ ಶುಭವಾರ್ತೆ. ಶುಭದಿನ **10.** ಈಶ್ವರನಿಗೆ ತಿಲಾರ್ಚನೆ ಮಾಡಿರಿ.

---




ದೈಹಿಕ ಜಾಡ್ಯ ಅಲರ್ಜಿ ಉಂಟಾಗಬಹುದು. ವಿನಾಕಾರಣ ಹೆದರಿಕೆ. ಆದರೆ ಬಹುದಿನಗಳ ನಂತರ ಕುಟುಂಬದಲ್ಲಿ ಸಂತೋಷದ ಸಮಾರಂಭ. ಕಲಾವಿದರು ಮತ್ತು ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಯಶಸ್ಸು ಸಿಗಲಿದೆ. ವಾಗ್ಮಿಗಳಿಂದ ಉತ್ತಮ ವಾಗ್ಝರಿ ಪ್ರದರ್ಶನ. ಕಲಾವಿದರಿಗೆ ಮಾನ ಸನ್ಮಾನದ ಗೌರವ ಪ್ರಾಪ್ತಿ. ಮೂತ್ರ ಜನಕಾಂಗ ಪೀಡೆ ಸಾಧ್ಯತೆ. ಶುಭದಿನ **09.** ಕಾರ್ತೀಕೇಯ ಸ್ತೋತ್ರ ಪಠಣ ಮಾಡಿರಿ.

---




ವಾರದ ಪ್ರಾರಂಭದಲ್ಲಿ ಮನೆಕಟ್ಟುವ ಕೆಲಸದಲ್ಲಿ ಉಂಟಾಗಿದ್ದ ಸಮಸ್ಯೆ ಬಗೆಹರಿಯುವುದು. ಕ್ರಯ ವಿಕ್ರಯದಲ್ಲಿ ವಂಚನೆ ನಡೆಯುವ ಸಂಭವವಿದೆ ಈ ಬಗ್ಗೆ ಜಾಗ್ರತೆ ಅವಶ್ಯ. ವಾರವಿಡಿ ಒಂದಿಲ್ಲೊಂದು ವಿವಾದದಲ್ಲಿ ಸಿಲುಕುವಿರಿ. ತಂದೆಯಿಂದ ಹಣಕಾಸಿನ ಸಹಾಯ ಸಾಧ್ಯತೆ. ಕಾಲಿಗೆ ನೋವು. ಆಸ್ಪತ್ರೆಗೆ ಖರ್ಚು. ನಿರೀಕ್ಷಿತ ಸ್ಪರ್ಧೆಯಲ್ಲಿ ಯಶಸ್ಸು. ಶುಭದಿನ **08.** ಗುರುದತ್ತಾತ್ರೆಯ ಆರಾಧನೆ ಮಾಡಿರಿ.

---




ಶಾರೀರಿಕ ಮಾನಸಿಕ ಉತ್ಸಾಹ ವೃದ್ಧಿಸುವುದು. ಸರಕಾರಿ ಕೆಲಸಗಳು ತ್ವರಿತ ಗತಿಯಲ್ಲಿ ನಡೆಯುವುದು. ಕೆಲವು ವಿಷಯದಲ್ಲಿ ಮಿತ್ರರಿಂದ ವಿರೋಧ ಕಾಣಿಸುವುದು. ಕೃಷಿ ಉತ್ಪನ್ನ ವಿಕ್ರಯದಾರರಿಗೆ ಲಾಭ. ಹೊಟ್ಟೆನೋವಿನ ಪ್ರಸಂಗ. ಅಜ್ಞಾತವಾಸದಿಂದ ಬಿಡುಗಡೆ. ಮಹತ್ವದ ಮಾತುಕತೆ. ಮನೆಯಲ್ಲಿ ಧಾರ್ಮಿಕ ಕಾರ್ಯ ನಡೆಸುವಿರಿ. ಶುಭದಿನ **06.** ಹನುಮಾನ್ ಚಾಲೀಸ್ ಪಠಿಸಿರಿ.

---




ಅನಿರೀಕ್ಷಿತ ಖರ್ಚಿನ ಪ್ರಸಂಗ. ಸರಕಾರಿ ಕೆಲಸದಲ್ಲಿ ವ್ಯತ್ಯಯ. ಸೇವಕರಿಂದ ಹಾನಿ, ತೊಂದರೆ. ಬಂಧುಗಳಿಗೆ ಆಪತ್ತು. ಮನೆಕೆಲಸ ಅರ್ಧಕ್ಕೆ ನಿಲ್ಲುವುದು. ಪ್ರೇಮ ಪ್ರಸಂಗಗಳಲ್ಲಿ ಭಗ್ನತೆ. ಅಧಿಕಾರಿಗಳಿಗೆ ಹಿನ್ನಡೆ. ಅವಿವಾಹಿತರಿಗೆ ವಿವಾಹ ಭಾಗ್ಯದ ಸೂಚನೆ. ವಾರಾಂತ್ಯದಲ್ಲಿ ಮನೆಯ ಆರ್ಥಿಕ ವ್ಯವಸ್ಥೆ ಉತ್ತಮಗೊಳ್ಳುವುದು. ಹಣದ ಒಳಹರಿವು ಹೆಚ್ಚಾಗುವುದು. ಶುಭದಿನ **09.** ಉಮಾಮಹೇಶ್ವರ ಪ್ರಾರ್ಥನೆ ಮಾಡಿರಿ.

---




ವಾರದಲ್ಲಿಯೇ ಉತ್ತಮ ಫಲ ಪ್ರಾಪ್ತಿಯ ರಾಶಿ. ಆಕಸ್ಮಿಕ ಧನಲಾಭ. ನಿರುದ್ಯೋಗಿಗಳಿಗೆ ಉದ್ಯೋಗ ಸಿಗುವುದು. ಸಂತತಿ ಇಲ್ಲದವರಿಗೆ ಸಂತತಿಯ ಸೂಚನೆ. ವಿವಾಹಾಪೆಕ್ಷಿಗಳಿಗೆ ಸಂಗಾತಿ ಲಭ್ಯ. ಮನೆಕೆಲಸದ ಹೊಸ ಸೇವಕರು ಸಿಗುವರು. ವ್ಯಾಪಾರದಲ್ಲಿ ಲಾಭ. ದುಬಾರಿ ವಸ್ತುಗಳ ಖರೀದಿ. ಕುಟುಂಬ ಸೌಖ್ಯ. ಶುಭದಿನ **07.** ಲಕ್ಷ್ಮೀ ನಾರಾಯಣ ಹೃದಯ ಪಾರಾಯಣ ಮಾಡಿರಿ.

---




ಕಷ್ಟದಲ್ಲೂ ಇಷ್ಟ ಫಲ ಪ್ರಾಪ್ತಿಯಾಗುವುದು. ಪರದೇಶ ಪ್ರವಾಸಕ್ಕೆ ಸಿದ್ದತೆ ನಡೆಯುವದು. ಸರಕಾರಿ ಅಧಿಕಾರ ಪ್ರಾಪ್ತಿಯೋಗ. ಶಿಕ್ಷಕರಿಗೆ ಪದೋನ್ನತಿಯೊಡನೆ ವರ್ಗಾವಣೆ ಸಂಭವ. ಕುಟುಂಬ ವರ್ಗದಲ್ಲಿ ಅನಾರೋಗ್ಯ. ಪ್ರಾಣಾಪಾಯ ಭೀತಿ. ಮನೆಗೆ ಬಂಧುಮಿತ್ರರ ಆಗಮನ. ವಿದ್ಯಾರ್ಥಿಗಳಿಗೆ ಉತ್ತಮ ಯಶಸ್ಸು. ಶುಭದಿನ **10.** ದುರ್ಗಾ ಆರಾಧನೆ ಮಾಡಿರಿ.

---




ಆರೋಗ್ಯದಲ್ಲಿ ಏರುಪೇರು. ಹೆಂಡತಿಯೊಡನೆ ಜಗಳ. ಕಚೇರಿ ಕಾಗದ ಪತ್ರಗಳು ಇದ್ದಕ್ಕಿದ್ದಂತೆ ಕಾಣೆಯಾಗುವಿಕೆ. ದೂರದಿಂದ ಅಶುಭವಾರ್ತೆ ಬರುವುದು. ದೈನಂದಿನ ಕೆಲಸಗಳು ಸರಾಗ. ದಿಢೀರ್ ಹಿರಿಯ ಅಧಿಕಾರಿಗಳ ಆಗಮನ. ಪತ್ನಿಯ ಮೂಲಕ ದ್ರವ್ಯ ಲಾಭ. ಮನೆಯಲ್ಲಿ ದೇವತಾ ಪೂಜೆ ನಡೆಯುವುದು. ವಿದ್ಯಾರ್ಥಿಗಳಿಗೆ ಉತ್ತಮ ಯಶಸ್ಸು. ಶುಭದಿನ **06.** ಗಣಪತಿಗೆ ದೂರ್ವಾರ್ಚನೆ ಮಾಡಿರಿ.

---




ವಾಹನ ಚಲಾಯಿಸುವಾಗ ಎಚ್ಚರವಿರಲಿ. ಅಕಸ್ಮಾತ್ ಅಪಘಾತ ಭಯ. ಕಾಲು ನೋವಿನ ಸಮಸ್ಯೆ. ಕೌಟುಂಬಿಕ ಖರ್ಚು ಜಾಸ್ತಿಯಾಗುವುದು. ಶತ್ರುಗಳು ತಲೆ ತಗ್ಗಿಸುವರು. ಹಳೆಯ ಮಿತ್ರರ ಆಗಮನ. ಮಕ್ಕಳಿಂದ ಶುಭವಾರ್ತೆ. ದಾಂಪತ್ಯ ಸೌಖ್ಯ. ಹಣಕಾಸಿನ ಲಭ್ಯತೆ. ಬರತಕ್ಕ ಹಳೆಯ ಬಾಕಿ ಸಾಲ ಬರುವುದು. ವಾರದ ಕೊನೆಯಲ್ಲಿ ಚಿಕ್ಕ ಪ್ರವಾಸ. ಶುಭದಿನ **07.** ನವಗ್ರಹ ಸ್ತೋತ್ರ ಮಾಡಿರಿ.

---




ಪ್ರಾರಂಭದಿಂದಲೂ ಶುಭಯೋಗ. ಯಾಂತ್ರಿಕ ವಸ್ತುಗಳ ಖರೀದಿ. ಶೈಕ್ಷಣಿಕ ಖಾತೆಯಲ್ಲಿ ಕೆಲಸದಲ್ಲಿರುವವರಿಗೆ ತಾತ್ಕಾಲಿಕ ಬಡ್ತಿ. ಬ್ಯಾಂಕ್ ನೌಕರರಿಗೆ ವರ್ಗಾವಣೆ ಸಂಭವ. ಕೈಗೊಂಡ ಕೆಲಸಗಳಲ್ಲಿ ನೀರಿಕ್ಷೆಗಿಂತ ಲಾಭ. ಗುತ್ತಿಗೆದಾರರು ಉತ್ತಮ ಧನ ಲಾಭ ಕಾಣುವಿರಿ. ಮಿತ್ರರಿಂದ ವಂಚನೆ ಸಂಭವ ಎಚ್ಚರ ಅವಶ್ಯ. ಮಕ್ಕಳ ಅನಾರೋಗ್ಯ. ಶುಭದಿನ **10.** ನವನಾಗ ಪೂಜೆ ಕ್ಷೀರಾಭಿಷೇಕ ಮಾಡಿರಿ.

---




ವಿನಾಕಾರಣ ಮಿತ್ರರು ಶತ್ರುಗಳಾಗುವರು. ಮೇಲಧಿಕಾರಿಗಳಿಂದ ಭಯದ ನೋಟಿಸು ಬರಬಹುದು. ಕಲಾವಿದರಿಗೆ ಸಂಗೀತಗಾರರಿಗೆ ವಾರದ ಮೊದಲಾರ್ಧ ಉತ್ತಮ. ಸೊಂಟನೋವು ಕಾಣಿಸುವುದು. ಮಕ್ಕಳ ಆರೋಗ್ಯದಲ್ಲಿ ಕೊಂಚ ಪ್ರಗತಿ. ವಿದ್ಯಾರ್ಥಿಗಳಿಗೆ ಅಭ್ಯಾಸದಲ್ಲಿ ಹಿನ್ನಡೆ. ವಾಹನ ಚಾಲಕರಿಗೆ ಎಚ್ಚರ ಅಗತ್ಯ. ಕೆಟ್ಟ ಜನರಿಂದ ಧನಪ್ರಾಪ್ತಿ. ಕುಟುಂಬ ಸೌಖ್ಯ. ಶುಭದಿನ **06.** ಆದಿತ್ಯ ಹೃದಯ ಏಳು ಸಾರೆ ಪಠಿಸಿರಿ.